ಏನಾದರೂ ಒದಗಿಸುವ ಬಗ್ಗೆ ವ್ಯವಸ್ಥೆ ಮಾಡುತ್ತೀರಾ ಎಂದು ಕೇಳಿದ್ದಾರೆ ಅದು ಸಭ್ಯಕ್ಕೆ ಪರಿಗಣನೆಯಲ್ಲಿ ಇಲ್ಲ. ಮತ್ತೆ ನಮ್ಮ ಶ್ರೀ ಕೆಂಪೇಗೌಡರವರು ಕೇಳಿದ ಪ್ರಶ್ನೆಗೆ ಉತ್ತರ ಹೇಳುವುದಾದರೆ ಈಗ ಏನು 30 ಪರ್ಸೆಂಟ್ ಹೆಣ್ಣು ಮಕ್ಕಳಿಗೆ ಕಾಯ್ದಿರಿಸಿದ್ದೇವೆ ಅದರ ಜೊತೆಗೆ 18 ಪರ್ಸೆಂಟ್‌ನಲ್ಲಿಯೂ ಬರುತ್ತದೆಯೇ ಎಂದು ಕೇಳಿದ್ದಾರೆ. 18 ಪರ್ಸೆಂಟ್‌ನಲ್ಲಿರತಕ್ಕದ್ದು ರಾಜ್ಯಾಂಗ ಬದ್ಧವಾಗಿ ಹೆಂಗಸರಾಗಲೀ ಇಲ್ಲವೇ ಗಂಡಸರಾಗಲೀ ಯಾರು ಬೇಕಾದರೂ ನಿಲ್ಲಬಹುದು ಅದಕ್ಕೂ ಇದಕ್ಕೂ ಏನೂ ಸಂಬಂಧವಿರುವುದಿಲ್ಲ. ಮತ್ತೆ ಬೀರೇಗೌಡರವರು ಹೇಳುತ್ತಿದ್ದರು ಆಡಳಿತಾಧಿಕಾರಿಗಳಿರುವುದರಿಂದ ಅನೇಕ ಕಾರ್ಯಕ್ರಮಗಳು ಸರಿಯಾಗಿ ಆಗಿಲ್ಲ ಭ್ರಷ್ಟಾಚಾರವಾಗುತ್ತಿದೆಯೆಂದು ಹೇಳಿದರು ಅದಕ್ಕೋಸ್ಕರವಾಗಿಯೇ ನಾವು ತ್ವರಿತವಾಗಿ ಚುನಾವಣೆಗಳನ್ನು ನಡೆಸಬೇಕೆಂದು ತೀರ್ಮಾನವನ್ನು ತೆಗೆದುಕೊಂಡಿರುವುದು.

ಇನ್ನು ಜೂನ್ ಮುಂಚಿತವಾಗಿ ಮೇ ನಲ್ಲಿಯೇ ಚುನಾವಣೆಗಳನ್ನು ನಡೆಸುವುದಕ್ಕಾಗುತ್ತದೆಯೇ ಎಂದು ಮಾನ್ಯ ಸದಸ್ಯರು ಪ್ರಶ್ನೆ ಕೇಳಿದ್ದಾರೆ. ಆದರೆ ನಾವು ಈಗಾಗಲೇ ಕ್ಯಾಲೆಂಡರ್ ಆಫ್ ಇವೆಂಟ್ಸ್ ಪ್ರಕಾರವಾಗಿ ಜೂನ್‌ನಲ್ಲಿಯೇ ಚುನಾವಣೆಗಳನ್ನು ನಡೆಸುವುದೆಂದು ಹೇಳಿ ಅದರ ಪ್ರಕಾರವಾಗಿಯೇ ಎಲ್ಲಾ ಸಿದ್ಧತೆಗಳನ್ನೂ ಮಾಡಿಕೊಂಡಿರುವುದರಿಂದ ಅದಕ್ಕಿಂತ ಮುಂಚಿತವಾಗಿ ಚುನಾವಣೆಗಳನ್ನು ನಡೆಸುವುದಕ್ಕಾಗುವುದಿಲ್ಲ.

ಟಿ. ನರಸೀಪುರದ ತಾಲೋಕಿನಲ್ಲಿ ಹೊಸದಾಗಿ ನೋಂದಾಯಿಸಲ್ಪಟ್ಟಿರುವ ಸಹಕಾರ ಸಂಘಗಳ ಬಗ್ಗೆ

146 ಶ್ರೀ ಟಿ. ಪಿ. ಜೋರಯ್ಯ (ಬನ್ನೂರು).—ಮಾನ್ಯ ಸಹಕಾರ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :—

ಅ) ಟಿ. ನರಸೀಪುರ ತಾಲೂಕಿನಲ್ಲಿ ಹೊಸದಾಗಿ ನೊಂದಾಯಿಸಲ್ಪಟ್ಟ ಸಹಕಾರ ಸಂಘಗಳು ಎಷ್ಟು ? (1981-82 ಮತ್ತು 1982-83ನೇ ಸಾಲಿಗೆ) ;

ಆ) ಈ ಸಹಕಾರ ಸಂಘಗಳು ಯಾವುವು ;

ಇ) ಅವು ನೊಂದಾಯಿಸಲ್ಪಟ್ಟ ದಿನಾಂಕಗಳ ವಿವರ ಪ್ರತಿ ಸಂಘದ ಸದಸ್ಯರ ಸಂಖ್ಯೆ ಮತ್ತು ಷೇರು ಬಂಡವಾಳ ಎಷ್ಟು, ಈ ಸಂಘಗಳು ಹಾಲಿ ಕೆಲಸ ಮಾಡುತ್ತಿವೆಯೇ ;

ಈ) ಈ ಸಂಘಗಳನ್ನು ಜರೂರಾಗಿ ನೋಂದಾಯಿಸಲು ಇದ್ದ ಪ್ರಬಲ ಕಾರಣಗಳೇನು ?

ಶ್ರೀ ಆರ್. ಎಲ್. ಜಾಲಪ್ಪ (ಸಹಕಾರ ಮಂತ್ರಿಗಳು).—ಅ) 1981-82 : 11

1982-83 : 8

ಒಟ್ಟು : 19

ಆ) ಮತ್ತು ಇ) ವಿವರಗಳು ಲಗತ್ತಿಸಿರುವ ಪಟ್ಟಿಯಲ್ಲಿ ನಮೂದಿಸಿದೆ.

ಈ) ತಾಂತ್ರಿಕ ಸಾಧ್ಯತೆ ಮತ್ತು ನಿಯಮುಗಳನ್ನೊಳಗೊಂಡಂತೆ ಪರಿಶೀಲಿಸಿ ಈ ಸಂಘಗಳನ್ನು ನೊಂದಾಯಿಸಲ್ಪಟ್ಟಿದೆ.

ಹೊಸದಾಗಿ ನೊಂದಾಯಿಸಲ್ಪಟ್ಟ ಸಹಕಾರ ಸಂಘಗಳ ವಿವರಣಾ ಪಟ್ಟಿ

ಕ್ರಮ ಸಂಖ್ಯೆ	ಸಹಕಾರ ಸಂಘದ ಹೆಸರು	ನೊಂದಣಿ ದಿನಾಂಕ	ಸದಸ್ಯರ ಸಂಖ್ಯೆ	ಷೇರು ಮೊತ್ತ	ಹಾಲಿ ಕೆಲಸ ನಿರ್ವಹಿಸುತ್ತಿದೆಯೇ
1	ಜಾವಳ್ಳಿ ಹಾಲು ಉತ್ಪಾದಕರ ಸಹಕಾರ ಸಂಘ ನಿ. ಜಾವಳ್ಳಿ ...	15-9-81	50	500-00	ಕೆಲಸ ಮಾಡುತ್ತಿದೆ
2	ಚನ್ನಬಸವಯ್ಯನ ಹುಂಡಿ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಚನ್ನಬಸವಯ್ಯನ ಹುಂಡಿ	15-9-81	50	500-00	,,
3	ಬನ್ನೂರು ಹೋಬಳಿ ಕಬ್ಬು ಬೆಳೆಗಾರರ ಸಹಕಾರ ಸಂಘ ನಿ. ಬನ್ನೂರು	4-1-82	80	2000-00	,,
4	ತಲಕಾಡು ಹೋಬಳಿ ಕಬ್ಬು ಬೆಳೆಗಾರರ ಸಹಕಾರ ಸಂಘ ನಿ. ಚನ್ನಬಸವಯ್ಯನ ಹುಂಡಿ	4-1-82	80	2000-00	,,
5	ಮೂಗೂರು ಹೋಬಳಿ ಕಬ್ಬು ಬೆಳೆಗಾರರ ಸಹಕಾರ ಸಂಘ ನಿ. ಹಿರಿಯೂರು.	4-1-82	80	2000-00	,,
6	ತರಕಾರಿ ಹಣ್ಣು ಹಂಪಲು ಮತ್ತು ತೆಂಗು ಬೆಳೆಗಾರರ ಸಹಕಾರ ಸಂಘ ನಿ. ಹೆಗ್ಗೂರು ಬನ್ನೂರು ಹೋಬಳಿ.	16-2-82	100	1000-00	,,
7	ತರಕಾರಿ ಹಣ್ಣು ಹಂಪಲು ಮತ್ತು ತೆಂಗು ಬೆಳೆಗಾರರ ಸಹಕಾರ ಸಂಘ ನಿ. ಕುರುಬೂರು, ಮೂಗೂರು ಹೋಬಳಿ.	20-2-82	100	1000-00	,,
8	ತರಕಾರಿ ಹಣ್ಣು ಹಂಪಲು ಮತ್ತು ತೆಂಗು ಬೆಳೆಗಾರರ ಸಹಕಾರ ಸಂಘ ನಿ. ತುಂಬಲ, ಕಸಬ ಹೋಬಳಿ	20-2-82	100	1000-00	,,
9	ತರಕಾರಿ ಹಣ್ಣು ಹಂಪಲು ಮತ್ತು ತೆಂಗು ಬೆಳೆಗಾರರ ಸಹಕಾರ ಸಂಘ ನಿ. ಹೆಮ್ಮಿಗೆ, ತಲಕಾಡು ಹೋಬಳಿ.	20-2-82	100	1000-00	,,
10	ಕೃಷಿ ಕಾರ್ಮಿಕರ ಹಾಗೂ ಸಾಮಾನ್ಯ ಕೆಲಸಗಾರರ ಸಹಕಾರ ಸಂಘ ನಿ. ಬನ್ನೂರು.	1-5-82	500	5625-00	,,
11	ಭುವನೇಶ್ವರಿ ಹರಿಜನ ಬಳಕೆದಾರರ ಸಹಕಾರ ಸಂಘ ನಿಯಮಿತ ಬನ್ನೂರು.	18-8-82	500	5000-00	,,
12	ಕೊತ್ತೆಗಾಲ ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಕೊತ್ತೆಗಾಲ.	21-10-82	50	500-00	,,
13	ತರಕಾರಿ ಹಣ್ಣು ಹಂಪಲು ಮತ್ತು ತೆಂಗು ಬೆಳೆಗಾರರ ಸಹಕಾರ ಸಂಘ ನಿ. ಕಗ್ಗಲಿಪುರ, ಸೋಸಲೆ ಹೋಬಳಿ.	20-2-82	100	1000-00	,,
14	ಕುರುಬರು ಹಾಲು ಉತ್ಪಾದಕರ ಸಹಕಾರ ಸಂಘ ನಿಯಮಿತ, ಕುರುಬೂರು	4-11-82	50	500-00	,,
15	ಸೋಸಲೆ ಹೋಬಳಿ ಬೆಲ್ಲ ಮಾರಾಟ ಸಹಕಾರ ಸಂಘ ನಿಯಮಿತ, ಕಗ್ಗಲಿಪುರ	11-1-83	75	1000-00	,,
16	ತಲಕಾಡು ಹೋಬಳಿ ಬೆಲ್ಲ ಮಾರಾಟ ಸಹಕಾರ ಸಂಘ ನಿಯಮಿತ, ಮಾಲಂಗಿ	12-1-83	75	1000-00	,,
17	ಕಸಬಾ ಹೋಬಳಿ ಬೆಲ್ಲ ಮಾರಾಟ ಸಹಕಾರ ಸಂಘ ನಿಯಮಿತ, ಟಿ ನರಸೀಪುರ	12-1-83	75	1000-00	,,
18	ಮೂಗೂರು ಹೋಬಳಿ ಬೆಲ್ಲ ಮಾರಾಟ ಸಹಕಾರ ಸಂಘ ನಿಯಮಿತ ಕೊತ್ತೆಗಾಲ	17-1-83	75	1000-00	,,
19	ಬನ್ನೂರು ಹೋಬಳಿ ಬೆಲ್ಲ ಮಾರಾಟ ಸಹಕಾರ ಸಂಘ ನಿಯಮಿತ ಬನ್ನೂರು	17-1-83	75	1000-00	,,

ಶ್ರೀ ಟಿ. ಪಿ. ಬೋರಯ್ಯ.--ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡಬೇಕಾಗಿದೆ ರೆ ಸರ್ಕಾರದವರು ಯಾವುದಾದರೂ ಯೋಜನ ಇಟ್ಟುಕೊಂಡಿದ್ದಾರೆಯೇ ? ಇದ್ದರೆ ಆದರ ವಿವರನನ್ನು ಕೊಡಿ ಎಂದು ಕೇಳುತ್ತಿದ್ದೇನೆ.

ಶ್ರೀ ಆರ್. ಎಲ್. ಜಾಲಪ್ಪ.--ಸಹಕಾರ ಸಂಘಗಳನ್ನು ರಿಜಿಸ್ಟರ್ ಮಾಡುವಾಗ ಇರತಕ್ಕ ಯೋಜನೆ ಇಷ್ಟೆ : ಅಲ್ಲಿನ ಆಡಳಿತಕ್ಕೆ ಒಳಪಟ್ಟ ಸ್ಥಳಗಳಲ್ಲಿ ಯಾವ ಯಾವ ಸಹಕಾರ ಸಂಘಗಳು ರಿಜಿಸ್ಟರ್ ಆಗಿವೆ ಮತ್ತು ಯಾವ ಯಾವ ತರಹದ ಸಹಕಾರ ಸಂಘಗಳು ರಿಜಿಸ್ಟರ್ ಆಗಿವೆ ಹಾಗೂ ಅವುಗಳು ಏನೇನು ಅನುಕೂಲಗಳನ್ನು ಒದಗಿಸುತ್ತಿವೆ ಎಂಬ ವಿವರಗಳನ್ನು ನೋಡತಕ್ಕದ್ದು. ಇದನ್ನು ಬಿಟ್ಟು ಬೇರೆ ಯಾವ ಯೋಜನೆಯೂ ಇರುವುದಿಲ್ಲ.

ಶ್ರೀ ಎಂ. ಮಹದೇವ್ --ರೆ ತ ಸೇವಾ ಸಹಕಾರ ಸಂಘದಲ್ಲಿ ಎಲ್ಲ ಸೌಕರ್ಯಗಳು ಇದ್ದರೂ ಕಬ್ಬು ಬೆಳೆಗಾರರಿಗೆ ಪ್ರತ್ಯೇಕವಾಗಿ ಕಬ್ಬು ಬೆಳೆಗಾರರ ಸಹಕಾರ ಸಂಘ ಎಂದು ರಿಜಿಸ್ಟರ್ ಮಾಡುವ ಅವಶ್ಯಕತೆ ಏನು ?

ಉಪಾಧ್ಯಕ್ಷರು.--ಅದಕ್ಕೂ ಇದಕ್ಕೂ ಸಂಬಂಧ ಇಲ್ಲ.

ಶ್ರೀ ಆರ್. ಎಲ್. ಜಾಲಪ್ಪ.--ಕಾನೂನು ಪ್ರಕಾರ ಮಾಡಿಕೊಳ್ಳುವುದಕ್ಕೆ ಏನು ಅಡ್ಡಿ ಇಲ್ಲ. ಅದು ಹಿಂದೆ ಮಾಡಿರತಕ್ಕ ಸೊಸೈಟಿ ಇರಬಹುದು ; ಈಗಲೂ ಮಾಡಬಹುದು. ಆಕ್ಟ್ ಪ್ರಕಾರ ಮಾಡಬೇಕೆಂದರೆ ಮಾಡುತ್ತೇವೆ.

ಶ್ರೀ ಎಂ. ಮಹದೇವ.--ಕಬ್ಬು ಬೆಳೆಗಾರರ ಸಂಘ ಯಾವ ವರ್ಗಕ್ಕೆ ಬರುತ್ತದೆ ?

ಉಪಾಧ್ಯಕ್ಷರು.--ಅದಕ್ಕೂ ಇದಕ್ಕೂ ಸಂಬಂಧವಿಲ್ಲ ಬಹಳ ಗಲಾಟೆ ಮಾಡಬೇಡಿ ಕುಳಿತುಕೊಳ್ಳಿ.

ಬೀದರ್ ಜಿಲ್ಲೆಯ ಲಂಬಾಣಿ ತಾಂಡಗಳಿಗೆ ವಿದ್ಯುತ್ ಸರಬರಾಜು

148 ಶ್ರೀ ಬಸವರಾಜ ಪಾಟೀಲ್ (ಹನುನಾಬಾದ್).--ಮಾನ್ಯ ವಿದುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಈ ಕೆಳಗೆ ಕಂಡ ಪ್ರಶ್ನೆಗಳನ್ನು ಉತ್ತರಿಸುವರೇ :--

ಅ) ಬೀದರ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳೆಷ್ಟು :

ಆ) ಎಷ್ಟು ತಾಂಡಗಳಿಗೆ ವಿದ್ಯುತ್ ಪೂರೈಕೆಯಾಗಿದೆ :

ಇ) ವಿದ್ಯುತ್ ಪೂರೈಕೆ ಇಲ್ಲದಿರುವ ತಾಂಡಗಳಿಗೆ ಪೂರೈಸಲು ಏನಾದರೂ ಕ್ರಮ ಕೈಗೊಳ್ಳುವುದೇ;

ಈ) ಹಾಗಿದ್ದಲ್ಲಿ ಎಂದಿನಿಂದ ಪ್ರಾರಂಭಿಸಲಾಗುವುದು ?

ಶ್ರೀ ಜೆ. ಹೆಚ್. ಪಟೇಲ್ ವಿದ್ಯುಚ್ಛಕ್ತಿ ಮತ್ತು ಅಬಕಾರಿ ಮಂತ್ರಿಗಳು ಅ) ಈ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆಗಳನ್ನು ಸಂಗ್ರಹಿಸಲಾಗುತ್ತಿದೆ ;

ಆ) ಬೀದರ ಜಿಲ್ಲೆಯಲ್ಲಿ 34 ತಾಂಡ ಮತ್ತು ವಾಡಿಗಳಿಗೆ ವಿದ್ಯುತ್ ಸರಬರಾಜು ಮಾಡಲಾಗಿದೆ.

ಇ) ವಿದ್ಯುತ್ ಒದಗಿಸಲು ಸದ್ಯದಲ್ಲಿ ಯಾವ ಕ್ರಮವನ್ನು ಕೈಗೊಂಡಿಲ್ಲ. ಆದರೆ ಮಂಡಳಿಯ ವಿದ್ಯುದ್ದೀಕರಣ ಯೋಜನೆಯ ನಿಯಮ ನಿಭಂಧನೆಗೆ ಒಳಪಟ್ಟದ್ದು ಇರುವ ತಾಂಡಗಳಿಗೆ ವಿದ್ಯುತ್ ಒದಗಿಸಲಾಗುವುದು.

ಈ) ಪ್ರಶ್ನೆ ಉದ್ಭವಿಸುವುದಿಲ್ಲ

ಶ್ರೀ ಜೆ. ಹೆಚ್. ಪಟೇಲ್--ಒಟ್ಟು ಬೀದರ್ ಜಿಲ್ಲೆಯಲ್ಲಿರತಕ್ಕ 591 ಗ್ರಾಮಗಳ ಪೈಕಿ 144 ಲಂಬಾಣಿ ತಾಂಡಗಳಿವೆ. 144 ರ ಪೈಕಿ 34 ತಾಂಡಗಳಿಗೆ ಈಗಾಗಲೇ ವಿದ್ಯುತ್ ಪೂರೈಕೆ ಆಗಿದೆ. ಇನ್ನೂ 110 ತಾಂಡಗಳಿಗೆ ಆಗಬೇಕಾಗಿದೆ. ಈ 110 ತಾಂಡಗಳನ್ನು ಕರ್ನಾಟಕ ವಿದ್ಯುತ್ ಮಂಡಲಿ ಯೋಜನೆ ಮತ್ತು ರಾಷ್ಟ್ರೀಯ ವಿದ್ಯುದೀಕರಣ ನಿಗಮ ಯೋಜನೆಯಲ್ಲಿ ಅಳವಡಿಸುವುದಕ್ಕೆ ಕ್ರಮ ತೆಗೆದುಕೊಂಡಿದೆ. ಬರುವ 3 ಅಥವಾ 4 ವರ್ಷಗಳಲ್ಲಿ ಸಂಪೂರ್ಣವಾಗಿ ಎಲ್ಲ ತಾಂಡಗಳಿಗೂ ವಿದ್ಯುತ್ತನ್ನು ಪೂರೈಸುತ್ತೇವೆ.

ಶ್ರೀ ಬಿ ಎಸ್. ಯಡಿಯೂರಪ್ಪ--ವರ್ಷಕ್ಕೆ ಹತ್ತರಂತೆ ಆದರೆ 110 ತಾಂಡಗಳಿಗೆ ವಿದ್ಯುತ್ ಪೂರೈಸುವುದು ಯಾವಾಗ ? ಅಂದಾಗ 11 ವರ್ಷ ಕಾಯಬೇಕಾಗುತ್ತದೆ !

ಉಪಾಧ್ಯಕ್ಷರು-- ಪ್ರಶ್ನೆ ಕೇಳಿರುವುದು ಪಾಟೀಲರು. ಇದು ಬೀದರ್ ಜಿಲ್ಲೆಗೆ ಸಂಬಂಧಿಸಿದ್ದು. ಆದ್ದರಿಂದ, ನೀವು ದಯವಿಟ್ಟು ಸಲಹೆ ಮಾಡಬೇಕು.

ಶ್ರೀ ಬಸವರಾಜ ಪಾಟೀಲ್--ಈಗ ಮುಖ್ಯಮಂತ್ರಿಯವರು ಉತ್ತರಿಸಿದ್ದು ಸರಿ ಇದೆ. ಆದರೆ ನನಗೆ ಕೊಟ್ಟರತಕ್ಕ ಉತ್ತರಕ್ಕೂ ಮತ್ತು ಅವರು ಈಗ ನೀಡಿದ ಉತ್ತರಕ್ಕೂ ಬಹಳ ವ್ಯತ್ಯಾಸ ಇದೆ. ನನಗೆ ಕೊಟ್ಟರತಕ್ಕ ಉತ್ತರದಲ್ಲಿ ಜಿಲ್ಲೆಯಲ್ಲಿರುವ ಲಂಬಾಣಿ ತಾಂಡಗಳ ಸಂಖ್ಯೆಯನ್ನು ಸಂಗ್ರಹಿಸಲಾಗುತ್ತಿದೆ ಎಂದು ಹೇಳಿದ್ದಾರೆ. ಆದರೆ ಈಗ 144 ಲಂಬಾಣಿಗಳ ತಾಂಡಗಳಿವೆ ಎಂದ